ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

ಸಂಖ್ಯೆ: ಬಿಸಿಯು/ಕು.ಸ/ಸಂಯೋಜನಾ/ಬಿ.ಇ.ಡಿ/2021-22

ದಿನಾಂಕ: 05.02.2022

**ಅಧಿಸೂಚನೆ**

ವಿಷಯ: 2021-22ನೇ ಶೈಕ್ಷಣಿಕ ಸಾಲಿಗೆ ರಾಜಾಜಿನಗರ ಕಾಲೇಜ್ ಆಫ್ ಎಜುಕೇಷನ್ ಕಾಲೇಜಿನ ಶಾಶ್ವತ ಸಂಯೋಜನಾ ನವೀಕರಿಸುವ ಬಗೆಗೆ.

ಉಲ್ಲೇಖ: 1. ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ: 30.12.2021
2. ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಿರ್ಣಯ ದಿನಾಂಕ:20.12.2021
3. ಕುಲಪತಿಯವರ ಅನುಮೋದನೆ ದಿನಾಂಕ: 05.02.2022.

****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ 59ನೇ ಪ್ರಕರಣದ 17ನೇ ಉಪಬಂಧದಲ್ಲಿ ಪ್ರದತ್ತವಾದ ಹಾಗೂ ತಿದ್ದುಪಡಿ ಅಧಿನಿಯಮ 2015ರ, 7ನೇ ಪ್ರಕರಣದ ಅಧಿಕಾರದನ್ವಯ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು, 2021-22ನೇ ಸಾಲಿಗೆ ಬೆಂಗಳೂರಿನ **ರಾಜಾಜಿನಗರ ಕಾಲೇಜ್ ಆಫ್ ಎಜುಕೇಷನ್**, ನಡೆಸುತ್ತಿರುವ ಕೆಳಕಂಡ ಕೋರ್ಸಿಗೆ/ಕೋರ್ಸುಗಳಿಗೆ ಈ *ಷರತ್ತಿಗೊಳಪಟ್ಟು (2020-21 ರಿಂದ 2024-25) ಶಾಶ್ವತ ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ.

| ಕ್ರಮ ಸಂಖ್ಯೆ | ಆಡಳಿತ ಮಂಡಳಿ | ಕಾಲೇಜು | ಕೋರ್ಸು | ವಿದ್ಯಾರ್ಥಿ ಪ್ರಮಾಣ |
|---|---|---|---|---|
| 1 | ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ, ರಾಜಾಜಿನಗರ ಬೆಂಗಳೂರು-560010 | ರಾಜಾಜಿನಗರ ಕಾಲೇಜ್ ಆಫ್ ಎಜುಕೇಷನ್ ಕೆ.ಟಿ.ಎಸ್.ವಿ. ಸಂಘ, 10ನೇ ಮುಖ್ಯರಸ್ತೆ, 5ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು-560010 | ಬಿ.ಇಡಿ. | 50 (ಐವತ್ತು)** |

**ವಿ.ಸೂ: 2021-22ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಲಗತ್ತಿಸಿದೆ, ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದೊಂದಿಗೆ ಮಾತ್ರ ಸಂಯೋಜನೆಯನ್ನು ನವೀಕರಿಸಲಾಗಿದೆ. ಕಾಲೇಜು 30 ದಿನಗಳ ಒಳಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ನಮೂದಿಸಿರುವ ಕೊರತೆಗಳನ್ನು ಸರಿದೂಗಿಸಿಕೊಂಡು ಉತ್ತಮ ಪಡಿಸಿಕೊಂಡಿರುವ ಬಗ್ಗೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಕುರಿತು ಅನುಸರಣಾ ವರದಿಯನ್ನು ನೀಡತಕ್ಕದ್ದು. ಇಲ್ಲವಾದಲ್ಲಿ 2022-23ನೇ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.**

*ಷರತ್ತುಗಳು:

1. ವಿದ್ಯಾರ್ಥಿಗಳ ಪ್ರವೇಶವನ್ನು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ಬಿ.ಎಡ್ ಕೋರ್ಸುಗಳ ಅಭ್ಯರ್ಥಿಗಳ ಆಯ್ಕೆ ನಿಯಮಗಳನ್ವಯ ಕಟ್ಟು-ನಿಟ್ಟಾಗಿ ಪಡೆಯತಕ್ಕದ್ದು.
2. ಕರ್ನಾಟಕ ಬಿ.ಎಡ್ ಕೋರ್ಸುಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಗಳು 1999ರ 2(1)ನೇ ನಿಯಮದಡಿಯಲ್ಲಿ ನಿರ್ಧರಿಸಲಾಗಿರುವ ವಿದ್ಯಾರ್ಥಿ ಪ್ರಮಾಣಕ್ಕೆ ಅನುಗುಣವಾಗಿ ಮತ್ತು ಪೂರಕವಾಗಿ ವಿಧಿಸಲಾಗಿರುವ ಷರತ್ತುಗಳಿಗೆ ಒಳಪಟ್ಟು ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು.
3. ಕಾಲೇಜುಗಳು ಎನ್.ಸಿ.ಟಿ.ಇ. ಅಧಿನಿಯಮ 1993 ರ 14ನೇ ಪ್ರಕರಣದಡಿ ಮಾನ್ಯತೆಯನ್ನು ಹೊಂದಿರತಕ್ಕದ್ದು.
4. ಕಾಲೇಜುಗಳು ಎನ್.ಸಿ.ಟಿ.ಇ ಜಾರಿಗೊಳಿಸಿರುವ ನೋಟೀಸ್‌ನಲ್ಲಿ ನಿರ್ದಿಷ್ಟಪಡಿಸಲಾಗಿರುವ ಷರತ್ತುಗಳನ್ನು ಕಟ್ಟು-ನಿಟ್ಟಾಗಿ ಪೂರೈಸತಕ್ಕದ್ದು, ಎನ್.ಸಿ.ಟಿ.ಇ ಮಾನ್ಯತೆ ಹೊಂದದ ಹೊರತು ಕಾಲೇಜು ವಿದ್ಯಾರ್ಥಿಗಳ ಪ್ರವೇಶ ಪಡೆಯುವಂತಿಲ್ಲ.

5. ಕಾಲೇಜುಗಳು ಹೆಸರು, ಕಟ್ಟಡ, ಸ್ಥಳ ಬದಲಾವಣೆಗೆ ಎನ್.ಸಿ.ಟಿ.ಇ ಸರ್ಕಾರ ಮತ್ತು ವಿಶ್ವವಿದ್ಯಾಲಯ ಅನುಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

6. ನಿರ್ದಿಷ್ಟ ವಿನಾಯಿತಿ ನೀಡದ ಹೊರತು ವಿಶ್ವವಿದ್ಯಾನಿಲಯ ಮಂಜೂರು ಮಾಡಿರುವ ಮುಂದುವರಿಕೆ ಸಂಯೋಜನೆ ಮತ್ತು ಎನ್.ಸಿ.ಟಿ.ಇ. ಮಂಜೂರು ಮಾಡಿರುವ ಮಾನ್ಯತೆ ರಹಿತವಾಗಿ ವಿದ್ಯಾರ್ಥಿಗಳ ಪ್ರವೇಶ ಪಡೆಯುವುದು, ಕರ್ನಾಟಕ ಮಾನ್ಯತೆ ರಹಿತ ಮತ್ತು ಅಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ಅಧಿನಿಯಮ 1992 ರ 3ನೇ ಪ್ರಕರಣದ ಉಲ್ಲಂಘನೆಯಾಗಿದ್ದು ಮೊಕದ್ದಮೆ ಹೂಡಲು ಆಕರ್ಷಿತವಾಗಿರುತ್ತದೆ.

7. ನಿಗಧಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಪಡೆಯುವುದು ಕೆ.ಎಸ್.ಯು ಅಧಿನಿಯಮ 2000ದ 60ನೇ ಪ್ರಕರಣದ ಉಲ್ಲಂಘನೆಯಲ್ಲದೆ ಮೇಲ್ಕಂಡ 1992 ರ ಅಧಿನಿಯಮ 4ನೇ ಪ್ರಕರಣದ ಉಲ್ಲಂಘನೆ ಸಹ ಆಗಿದ್ದು, ಮೊಕದ್ದಮೆ ಹೂಡಲು ಅಕರ್ಷಿತವಾಗುವುದಲ್ಲದೆ ಸಂಯೋಜನೆ ಹಿಂತೆಗೆದುಕೊಳ್ಳಲು ಸಕಾರಣವಾಗುತ್ತದೆ.

8. ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ಷರತ್ತುಗಳನ್ನು ಕಟ್ಟು-ನಿಟ್ಟಾಗಿ ಪಾಲಿಸತಕ್ಕದ್ದು.

9. ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.

10. ವಿಶ್ವವಿದ್ಯಾನಿಲಯವು ಕಾಲೇಜಿನ ವಿದ್ಯಾರ್ಥಿಗಳು ಭೋದಕರು ಹಾಗೂ ಭೋದಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾನಿಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣ ಮೀರದಂತೆ ಹಾಗೂ ವಿಶ್ವವಿದ್ಯಾನಿಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.

11. ವೈಶಾಕ v/s ರಾಜಸ್ಥಾನ ರಾಜ್ಯ ಸರ್ಕಾರದ ವ್ಯಾಜ್ಯಕ್ಕೆ ಸಂಬಂಧಿಸಿದಂತೆ, ದಿನಾಂಕ: 13-08-1997ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಕಾಲೇಜು ಅಥವಾ ಕಛೇರಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಯಾವುದೇ ವ್ಯಕ್ತಿಯಿಂದ (ಭೋದಕ/ಭೋದಕೇತರ/ಆಡಳಿತಮಂಡಳಿ) ಅಥವಾ ವಿದ್ಯಾರ್ಥಿಯಿಂದ ಮಹಿಳೆಯರಿಗೆ/ ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕಿರುಕುಳ, ಲೈಂಗಿಕ ಕಿರುಕುಳ ನೀಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾವುದೇ ವ್ಯಕ್ತಿ/ವಿದ್ಯಾರ್ಥಿ ಈ ರೀತಿಯಾದ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರನ್ನು ಕೆಲಸದಿಂದ/ವಿದ್ಯಾರ್ಥಿದೆಸೆಯಿಂದ ವಿಮುಕ್ತಿಗೊಳಿಸಬಹುದಾಗಿದೆ. ಕಾಲೇಜು ಈ ರೀತಿಯ ಅಪರಾಧಗಳನ್ನು/ಚಟುವಟಿಕೆಗಳನ್ನು ಮಟ್ಟಹಾಕಲು ಸರ್ವೋಚ್ಚ ನ್ಯಾಯಾಲದ ಆದೇಶದಂತೆ ದೂರು ಸಮಿತಿಯನ್ನು ಸ್ಥಾಪನೆ ಮಾಡತಕ್ಕದ್ದು.

12. ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಮಟ್ಟಕ್ಕೆ ಕಾಲೇಜು, ಕೋರ್ಸುಗಳ ಶಿಕ್ಷಣ ಕ್ರಮವನ್ನು ಉತ್ತಮಪಡಿಸತಕ್ಕದು. ವಿದ್ಯಾರ್ಥಿಗಳನ್ನು ಹಾಗೂ ಸೇವೆಯಲ್ಲಿರುವ ಭೋಧಕರುಗಳನ್ನು ಪ್ರಾಂಶುಪಾಲರು/ ಆಡಳಿತ ಮಂಡಳಿಯವರು ಸಹಾನುಭೂತಿಯಿಂದ ನೋಡಿಕೊಳ್ಳತಕ್ಕದು.

13. ಕಾಲೇಜು, ವಿನಾಕಾರಣ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು ಆರು ತಿಂಗಳ ಅವಧಿ ಮೀರದಂತೆ ತಮ್ಮಲ್ಲಿಯೇ ಇಟ್ಟುಕೊಳ್ಳತಕ್ಕದ್ದಲ್ಲ. ಪ್ರವೇಶ ಅನುಮೋದನೆಗಾಗಿ ಸಲ್ಲಿಸಿರುವ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು, ಪ್ರವೇಶ ಅನುಮೋದನೆಯಾದ ನಂತರ ವಿದ್ಯಾರ್ಥಿಗಳಿಗೆ ತ್ವರಿತವಾಗಿ ವಿತರಣೆಯನ್ನು ಮಾಡಿ ವಿಶ್ವವಿದ್ಯಾನಿಲಯಕ್ಕೆ ತಿಳಿಸತಕ್ಕದ್ದು.

14. ವಿದ್ಯಾರ್ಥಿಗಳು, ವರ್ಗಾವಣೆ ಪತ್ರವನ್ನು ನೀಡುವ ಬಗ್ಗೆ ಮನವಿ ಸಲ್ಲಿಸಿದಲ್ಲಿ, ಕಾಲೇಜು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡದೆ, ವರ್ಗಾವಣೆ ಪತ್ರವನ್ನು ನೀಡತಕ್ಕದ್ದು. ಈ ಬಗ್ಗೆ ಆ ವರ್ಷದ/ ಸೆಮಿಸ್ಟರಿನ ಪೂರ್ಣವಾಗದ ಅವಧಿಯ ಭೋದನಾ ಶುಲ್ಕವನ್ನು ಹೊರತುಪಡಿಸಿ, ಯಾವುದೇ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲು ನಿಯಮಾವಳಿ ಪ್ರಕಾರ ಅನುಮತಿ ಇರುವುದಿಲ್ಲ.

15. ಯಾವುದೇ ರೀತಿಯಾದ ಕ್ಯಾಪಿಟೇಷನ್ ಶುಲ್ಕವನ್ನು ಕಾಲೇಜು ವಸೂಲಿ ಮಾಡತಕ್ಕದ್ದಲ್ಲ.

16. 2022-23ನೇ ಸಾಲಿಗೆ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಕಾಲೇಜು ತಪ್ಪದೆ ಅರ್ಜಿಯನ್ನು ಸಲ್ಲಿಸಕ್ಕದ್ದು.

17. ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್ (NAAC) ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.

18. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು. ಹಾಗೂ ಕಡ್ಡಾಯವಾಗಿ ಮೌಲ್ಯಮಾಪನಕಾರ್ಯಕ್ಕೆ ಕಳುಹಿಸತಕ್ಕದ್ದು, ತಪ್ಪಿದಲ್ಲಿ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

19. ಸಂಯೋಜನಾ ಶುಲ್ಕದ ಮೇಲೆ GST ಅನ್ವಯವಾಗುವುದರಿಂದ 2018-19 ರಿಂದ 2021-22ನೇ ಸಾಲಿನ ಒಟ್ಟು 4 ವರ್ಷದ ಸಂಯೋಜನಾ ಶುಲ್ಕದ ಮೇಲೆ 18% GST ಮೊತವನ್ನು ಲೆಕ್ಕಹಾಕಿ ಪಾವತಿಸುವುದು.

ಆಜ್ಞೆ ಮೇರೆಗೆ

ಕುಲಸಚಿವರು

ಗೆ,

**ಪ್ರಾಂಶುಪಾಲರು,**
ರಾಜಾಜಿನಗರ ಕಾಲೇಜ್ ಆಫ್ ಎಜುಕೇಷನ್
ಕೆ.ಟಿ.ಎಸ್.ವಿ. ಸಂಘ, 10ನೇ ಮುಖ್ಯರಸ್ತೆ, 5ನೇ ಬ್ಲಾಕ್,
ರಾಜಾಜಿನಗರ ಬೆಂಗಳೂರು-560010.

ಪ್ರತಿಗಳು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560 001.
2) ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-560 001.
3) ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು-560 001.
4) ಅಧ್ಯಕ್ಷರು, ಎಸ್.ಆರ್.ಸಿ.ಆಫ್ ಎನ್.ಸಿ.ಟಿ.ಇ. ನ್ಯಾಷನಲ್ ಲಾ ಸ್ಕೂಲ್ ಎದುರು ನಾಗರಭಾವಿ, ಬೆಂಗಳೂರು-560 072.
5) ಪ್ರಾದೇಶಿಕ ನಿರ್ದೇಶಕರು, ಎಸ್.ಆರ್.ಸಿ.ಆಫ್ ಎನ್.ಸಿ.ಟಿ.ಇ. ನ್ಯಾಷನಲ್ ಲಾ ಸ್ಕೂಲ್ ಎದುರು ನಾಗರಭಾವಿ, ಬೆಂಗಳೂರು-560 072.
6) ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶಕರು 100 ಅಡಿ ರಿಂಗ್ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು – 560 085.
7) ವಿಶೇಷಾಧಿಕಾರಿ, ಕೇಂದ್ರೀಕೃತ ಪ್ರವೇಶ ಘಟಕ, ಕಾವೇರಿ ಭವನದ ಎದುರು, ಬೆಂಗಳೂರು-560 009.
8) ಉಪ ಕುಲಸಚಿವರು/ಅಧೀಕ್ಷಕರು, ಶೈಕ್ಷಣಿಕ ವಿಭಾಗ 1/4, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
9) ಸಮನ್ವಯಾಧಿಕಾರಿ, ಅಂಕಿ ಅಂಶಗಳ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
10) ಕಛೇರಿ ಪ್ರತಿ /ರಕ್ಷಾ ಕಡತ.